# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(5)/ಪಿಆರ್/62/19-20

ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 02-08-2019

## ಸುತ್ತೋಲೆ

**ವಿಷಯ:** ಅಧಿಕಾರಿ / ನೌಕರರು ಕಛೇರಿಗೆ ನಿಗದಿತ ಸಮಯದಲ್ಲಿ ಹಾಜರಾಗಿ ಶಿಸ್ತುಬದ್ಧವಾಗಿ ದಕ್ಷತೆಯಿಂದ ಕಛೇರಿ ಕೆಲಸಕಾರ್ಯಗಳನ್ನು ನಿರ್ವಹಿಸುವ ಬಗ್ಗೆ.

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪಾಲಿಕೆಯ ಎಲ್ಲಾ ಅಧಿಕಾರಿ / ನೌಕರರುಗಳು ಬೆಳಗ್ಗೆ 10:00 ಗಂಟೆಗೆ ಕಡ್ಡಾಯವಾಗಿ ಕಛೇರಿಗೆ ಹಾಜರಾಗಿ ಬಯೋಮೆಟ್ರಿಕ್ ವ್ಯವಸ್ಥೆಯಲ್ಲಿ ಹಾಜರಾತಿಯನ್ನು ಸಲ್ಲಿಸಿ ತಮ್ಮ ಗುರುತಿನ ಚೀಟಿಗಳನ್ನು ಧರಿಸಿ ತಮಗೆ ನಿಗಧಿಪಡಿಸಿರುವ ಕಛೇರಿಯಲ್ಲಿ ಕಾರ್ಯನಿರ್ವಹಿಸುವುದು.

ತಮ್ಮ ಕಾರ್ಯನಿರ್ವಹಣೆ ವೇಳೆಯಲ್ಲಿ ಕಛೇರಿಗೆ ಬರುವ ಸಾರ್ವಜನಿಕರು / ಅಧಿಕಾರಿ / ನೌಕರರುಗಳ ಬಳಿ ಸೌಜನ್ಯದಿಂದ ವರ್ತಿಸಿ ಯಾವುದೇ ರೀತಿಯ ಕಾಲವಿಳಂಬಕ್ಕೆ ಅವಕಾಶಕೊಡದೇ ದಕ್ಷತೆಯಿಂದ ತಮ್ಮ ಕರ್ತವ್ಯ ನಿರ್ವಹಿಸುವುದು.

ಪೂಜ್ಯ ಮಹಾಪೌರರ ಕಛೇರಿ, ಎಲ್ಲಾ ಸ್ಥಾಯಿ ಸಮಿತಿಗಳ ಕಛೇರಿ, ಆಯುಕ್ತರ ಕಛೇರಿ ಹಾಗೂ ಎಲ್ಲಾ ಇಲಾಖಾ ಮುಖ್ಯಸ್ಥರ ಕಛೇರಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಛೇರಿಗಳು ಕಡ್ಡಾಯವಾಗಿ ಸಂಜೆ 05:30 ಗಂಟೆಗೆ ಮುಚ್ಚಿ ಎಲ್ಲಾ ಅಧಿಕಾರಿ / ನೌಕರರುಗಳು ಬಯೋಮೆಟ್ರಿಕ್ ವ್ಯವಸ್ಥೆಯಲ್ಲಿ ತಮ್ಮ ಹಾಜರಾತಿಯನ್ನು ದಾಖಲಿಸಿ ಕಛೇರಿಯಿಂದ ನಿರ್ಗಮಿಸುವುದು. ಯಾವುದೇ ತುರ್ತು ಸಂದರ್ಭದಲ್ಲಿ ಸಂಜೆ 05:30 ಗಂಟೆಯ ನಂತರವೂ ಕಛೇರಿಯಲ್ಲಿ ಕೆಲಸಗಳನ್ನು ನಿರ್ವಹಿಸಬೇಕಾದ್ದಲ್ಲಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಂದ ಲಿಖಿತವಾಗಿ ಅನುಮತಿಪಡೆದು ಕಾರ್ಯನಿರ್ವಹಿಸಲು ಸೂಚಿಸಿದೆ.

ಪಾಲಿಕೆಯ ಕೇಂದ್ರ ಕಛೇರಿಯ ಆವರಣದಲ್ಲಿ ಮುಖ್ಯ ಕಟ್ಟಡ, ಅನೆಕ್ಸರ್ ಕಟ್ಟಡ-1. ಅನೆಕ್ಸರ್ ಕಟ್ಟಡ-2 ಮತ್ತು ಅನೆಕ್ಸರ್ ಕಟ್ಟಡ-3 ರಲ್ಲಿ ಹಲವಾರು ಕಛೇರಿಗಳಿದ್ದು, ಸದರಿ ಕಛೇರಿಗಳಲ್ಲಿ ಕಛೇರಿಯ ಅವಧಿ ಮುಗಿದ ನಂತರ ಅಧಿಕಾರಿ / ಸಿಬ್ಬಂದಿಗಳು ತಾವು ವ್ಯವಹರಿಸುತ್ತಿದ್ದ ಕಡತ / ಪತ್ರಗಳನ್ನು ಮೇಜಿನಿಂದ ತೆಗೆದು ಸುರಕ್ಷಿತವಾಗಿ ಅಲ್ಮೇರಾಗಳಲ್ಲಿ ಇಡಲು ಕ್ರಮವಹಿಸುವುದು ಹಾಗೂ ಕಛೇರಿಯ ಎಲ್ಲಾ ವಿದ್ಯುತ್ ದೀಪಗಳು, ಸೀಲಿಂಗ್ ಫ್ಯಾನ್‌ಗಳು, ಹವಾ ನಿಯಂತ್ರಣ ವ್ಯವಸ್ಥೆಗಳು, ಜೆರಾಕ್ಸ್ ಯಂತ್ರಗಳು, ಗಣಕಯಂತ್ರಗಳು ಮತ್ತು ಪ್ರಿಂಟರ್‌ಗಳನ್ನು ಕಡ್ಡಾಯವಾಗಿ ತಟಸ್ಥಗೊಳಿಸುವುದು ಹಾಗೂ ತಮ್ಮ ಕಛೇರಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾತ್ರಿ ಕಾವಲುಗಾರರು ಕಡ್ಡಾಯವಾಗಿ ಕಛೇರಿಗಳಿಗೆ ಬೀಗಹಾಕುವುದನ್ನು ಖಾತ್ರಿಪಡಿಸಿಕೊಳ್ಳಲು ಈ ಮೂಲಕ ಸೂಚಿಸಿದೆ.

ಸೂಕ್ತ ಕಾರಣಗಳಿಲ್ಲದ ಹೊರತು ಯಾವುದೇ ಅಧಿಕಾರಿ / ನೌಕರರು ಸಂಜೆ 05:30 ಗಂಟೆಯ ನಂತರ ತಮ್ಮ ಕಛೇರಿಗಳಲ್ಲಾಗಲೀ ಅಥವಾ ಕಛೇರಿಯ ಆವರಣದಲ್ಲಾಗಲೀ ಕಡ್ಡಾಯವಾಗಿ ಇರತಕ್ಕದ್ದಲ್ಲ. ಒಂದು ವೇಳೆ ಕಛೇರಿಯ ಅವಧಿ ಮುಗಿದ ನಂತರವೂ ಯಾವುದೇ ಅಧಿಕಾರಿ / ನೌಕರರು ತಮ್ಮ ಕಛೇರಿಯಿಂದ ಸೂಕ್ತ ಕಾರಣವಿಲ್ಲದೇ ನಿರ್ಗಮಿಸದೇ ಕಛೇರಿಯಲ್ಲಾಗಲೀ ಅಥವಾ ಕಛೇರಿಯ ಆವರಣದಲ್ಲಾಗಲೀ ಹಾಜರಿದ್ದು ಯಾವುದೇ ರೀತಿಯ ಅನಾವಶ್ಯಕ ಗುಂಪುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಲ್ಲಿ

. . . 2 .

ಅಂತವರ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲಾಗುವುದು. ಹಾಗೂ ಸಂಜೆ 06:00 ಗಂಟೆಯ ನಂತರ ಕಾರ್ಯಪಾಲಕ ಅಭಿಯಂತರರು (ಎಂ.ಪಿ.ಇ.ಡಿ) ರವರು ಭದ್ರತಾ ಸಿಬ್ಬಂದಿಗಳೊಂದಿಗೆ ಮತ್ತು ಪೋಲೀಸ್ ಇಲಾಖೆಯವರೊಂದಿಗೆ ಕೇಂದ್ರ ಕಛೇರಿಯಲ್ಲಿ ಪ್ರತಿನಿತ್ಯ ತಪಾಸಣೆ ನಡೆಸಿ ಅಪರಿಚಿತ ವ್ಯಕ್ತಿಗಳು ವಾಹನ ನಿಲ್ಲಿಸಿದ್ದಲ್ಲಿ ಹಾಗೂ ಅಕ್ರಮ ಚಟುವಟಿಕೆಗಳು ಕಂಡು ಬಂದಲ್ಲಿ ಹಾಗಿಂದಾಗ್ಗೆ ಅಕ್ರಮ ಚಟುವಟಿಕೆ ಮತ್ತು ವಾಹನ ನಿಲುಗಡೆ ಇದ್ದಲ್ಲಿ ಸಂಬಂಧಪಟ್ಟವರ ಮೇಲೆ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ಕಟ್ಟುನಿಟ್ಟಿ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು : ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ಉಪ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಆಯುಕ್ತರು / ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಎಲ್ಲಾ ವಲಯ ಅಪರ / ಜಂಟಿ ಆಯುಕ್ತರು ರವರಿಗೆ ಕಳುಹಿಸಿದೆ.
: ಎಲ್ಲಾ ವಲಯ ಮತ್ತು ಯೋಜನೆಗಳ ಮುಖ್ಯ ಅಭಿಯಂತರರು ರವರಿಗೆ ಕಳುಹಿಸಿದೆ.
: ಅಧ್ಯಕ್ಷರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳಿಗೆ, ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರುಗಳಿಗೆ ಕಳುಹಿಸಿಕೊಡಲು ಕೋರಿದೆ.
: ಮುಖ್ಯ ಲೆಕ್ಕಾಧಿಕಾರಿ / ಮತ್ತು ಎಲ್ಲಾ ವಲಯದ ಸಹಾಯಕ ನಿಯಂತ್ರಕರು (ಹಣಕಾಸು) ರವರಿಗೆ ಕಳುಹಿಸಿದೆ.
: ಉಪ ನಿಯಂತ್ರಕರು (ಹಣಕಾಸು) ರವರಿಗೆ ಕಳುಹಿಸಿದೆ.
: ಮಾಹಿತಿ ತಂತ್ರಜ್ಞಾನ ಸಲಹೆಗಾರರು ರವರಿಗೆ ಕಳುಹಿಸುತ್ತಾ, ಸದರಿ ಸುತ್ತೋಲೆಯನ್ನು ಪಾಲಿಕೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು ಸೂಚಿಸಿದೆ.
: ಕಾರ್ಯಪಾಲಕ ಅಭಿಯಂತರರು (ಎಂ.ಪಿ.ಇ.ಡಿ) ರವರು ಸುತ್ತೋಲೆಯಂತೆ ಅಗತ್ಯ ಕ್ರಮಕೈಗೊಂಡು ವರದಿ ಸಲ್ಲಿಸುವುದು.
: ಸಂಬಂಧಪಟ್ಟ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ
: ಕಛೇರಿ ಪ್ರತಿ.

35